**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ.**233/2022**
ವಾ.ಸಾ-**2**

ಸಾಕ್ಷಿಗೆ ದಿನಾಂಕಃ **30-01-2024** ರಂದು ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು ಶ್ರೀ ಡಿ ಎನ್ ಎಂ ಪ್ರತಿವಾದಿಯರ ಪರ ವಕೀಲರಿಂದ

1. ನಿಪಿ-2 ರಲ್ಲಿ ಬುದ್ಧಿ ಮಾಂದ್ಯತೆ ಇರುವ ಬಗ್ಗೆ ನಾನು ನಮೂದು ಮಾಡಿಲ್ಲ. ನಮ್ಮ ಆಸ್ಪತ್ರೆಯಲ್ಲಿ 5 ವರ್ಷಗಳ ಹಿಂದಿನ ದಾಖಲೆಗಳು ಲಭ್ಯ ಇರುವುದಿಲ್ಲ ಎಂದರೆ ಸರಿ. ನಿಪಿ-2 ನ್ನು ವಾದಿಯು ಹಾಜರುಪಡಿಸಿದ ಹೊರರೋಗಿ ಚೀಟಿಯ ಆಧಾರದ ಮೇಲೆ ಬರೆದುಕೊಟ್ಟಿದ್ದೇನೆ. ಸದರಿ ಹೊರರೋಗಿ ಚೀಟಿ/ಪುಸ್ತಕವು ಮುಗಿದ ನಂತರ ಇನ್ನೊಂದು ಪುಸ್ತಕವನ್ನು ನೀಡುತ್ತೇವೆ.

2. ನಿಪಿ-2 ರಲ್ಲಿ ವಾದಿಯು 2009 ರಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇಲ್ಲ. ನಿಪಿ-2 ನ್ನು ನಿಪಿ-1 ರ ಆಧಾರದ ಮೇಲೆ ನೀಡಿದ್ದೇನೆ. ನಿಪಿ-2 ರಲ್ಲಿ 2009 ನೇ ವರ್ಷದ ಬಗ್ಗೆ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ಸರಿ. ಈ ದಾವೆಯಲ್ಲಿನ ವಾದಿಗೆ ಸಂಬಂಧಿಸಿದ ಖಾಯಿಲೆಯಿಂದ ಬಳಲುತ್ತಿರುವ ರೋಗಿಯ ದಾಖಲಾತಿಗಳನ್ನು ಸಾಮಾನ್ಯವಾಗಿ ಬಹಳ ಜೋಪಾನವಾಗಿ ಉಳಿಸಿಕೊಳ್ಳುವುದು ಅತಿ ಅವಶ್ಯಕ ಮತ್ತು ಆಸ್ಪತ್ರೆಯ ಕರ್ತವ್ಯವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವೈದ್ಯಕೀಯ ಕಾನೂನಿಗೆ ಒಳಪಟ್ಟ ಪ್ರಕರಣಗಳ ದಾಖಲಾತಿಗಳನ್ನು ಮಾತ್ರ ಉಳಿಸಿಕೊಳ್ಳುತ್ತೇವೆ ಎಂದು ನುಡಿಯುವರು.

3. ಸದರಿ ಪ್ರಕರಣದಲ್ಲಿನ ರೋಗಿಗಳು ಸಾಮಾನ್ಯವಾಗಿ ಪ್ರತಿ ತಿಂಗಳು ಅಥವಾ 3 ತಿಂಗಳಿಗೊಮ್ಮೆ ವೈದ್ಯರನ್ನು ಭೇಟಿಯಾಗಲು ಸೂಚಿಸಿರುತ್ತೇವೆ.

**ಅಸಲು ದಾವಾ ಸಂಖ್ಯೆ.233/2022**
**ವಾ.ಸಾ-2**

ಅದರಂತೆ ಈ ದಾವೆಯಲ್ಲಿನ ವಾದಿಯು ಪ್ರತಿ ತಿಂಗಳು ಅಥವಾ 3 ತಿಂಗಳಿಗೊಮ್ಮೆ ನನ್ನನ್ನು ಭೇಟಿಯಾಗಿ ಚಿಕಿತ್ಸೆ ಪಡೆದಿದ್ದಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುವರು.

4. ಸಾಮಾನ್ಯವಾಗಿ ನಮ್ಮ ಆಸ್ಪತ್ರೆಯಲ್ಲಿ ರೋಗಿಗಳು ಮತ್ತು ಚಿಕಿತ್ಸೆ ಬಗ್ಗೆ ರಿಜಿಸ್ಟರನ್ನು ಮಾಡಿರುತ್ತೇವೆ ಎಂದರೆ ಸರಿ. ಈ ದಾವೆಯಲ್ಲಿ ನ್ಯಾಯಾಲಯದಿಂದ ಸಾಕ್ಷ್ಯ ನುಡಿಯಲು ಆಜ್ಞಾ ಪತ್ರಿಕೆ ಬಂದ ನಂತರ ಸದರಿ ರಿಜಿಸ್ಟರನ್ನು ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಿಂದ ಯಾವುದೇ ಆದೇಶ ಇರಲಿಲ್ಲ ಎಂದು ನುಡಿಯುುವರು.

5. ನಿಪಿ-2 ರಲ್ಲಿ 2007 ರ ಬಗ್ಗೆ ನಿಪಿ-1 ರ ಆಧಾರದ ಮೇಲೆ ಬರೆದಿದ್ದೇನೆ. ನಿಪಿ-1 ರಲ್ಲಿ ನಮೂದಿಸಿದಂತೆ ವಾದಿಯು ಯಾವುದೇ ಗುಣ ಲಕ್ಷಣಗಳಿಂದ ಬಳಲುತ್ತಿರಲಿಲ್ಲ ಮತ್ತು ಅವರು ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ನಿಪಿ-2 ನ್ನು ನ್ಯಾಯಾಲಯಕ್ಕೆ ಅವಶ್ಯಕವಾಗಿರುವುದರಿಂದ ಕೊಟ್ಟಿದ್ದೇನೆ ಎಂಬುದರ ಕುರಿತು ನಿಪಿ-2 ರಲ್ಲಿ ಬರೆದಿಲ್ಲ.

6. ನಿಪಿ-3 ನ್ನು ವಾದಿಯ ಹೆಂಡತಿ ಹೇಳಿದ್ದಾರೆ ಎಂಬ ಕಾರಣಕ್ಕೆ ಕೊಟ್ಟಿದ್ದೇನೆ. ನಿಪಿ-3 ರ ಮೊದಲು ನೀಡಿದ ದಾಖಲಾತಿಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ವಾದಿಯು ಮಾನಸಿಕವಾಗಿ ಬಳಲುತ್ತಿದರು ಎಂದು ಮತ್ತು ನಾನು ಅವರಿಗೆ ಚಿಕಿತ್ಸೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**